ಈರುಳ್ಳಿ ಮಾವಿನ ಹಣ್ಣು ಪ್ರಮಾಣ ಎಷ್ಟು?

ಈ) ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ರೈತರಿಂದ ಖರೀದಿಸಿದ ಆಲೂಗಡ್ಡೆಯ ಪ್ರಮಾಣ ಎಷ್ಟು?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು.

ಆ) ಧಾರವಾಡ ಎ.ಪಿ.ಎಂ.ಸಿ. ಆವರಣದಲ್ಲಿ 1 ಎಕರೆ ಪ್ರದೇಶವನ್ನು ಶೀತಲಗೃಹ ನಿರ್ಮಿಸುವ ಉದ್ದೇಶದಿಂದ ತೋಟಗಾರಿಕೆ ಇಲಾಖೆಯು ಖರೀದಿಸಿದ್ದು, ಈ ಸ್ಥಳದಲ್ಲಿ ಧಾರವಾಡ ಜಿಲ್ಲೆ ತೋಟಗಾರಿಕೆ ಉತ್ಪನ್ನಗಳ ಬೆಳೆಗಾರರ ಸಹಕಾರ ಮಾರಾಟ ಮತ್ತು ಸಂಸ್ಕರಣ ಸಂಘ(ನಿ)ದ ವತಿಯಿಂದ ಶೀಥಲಗೃಹ ನಿರ್ಮಿಸಲು ನಕಾಶೆ ಮತ್ತು ಅಂದಾಜು ಸಿದ್ಧಪಡಿಸಲಾಗುತ್ತಿದೆ.

ಇ) ಧಾರವಾಡ ತಾಲ್ಲೂಕಿನಲ್ಲಿ 21,765 ಟನ್ ಆಲೂಗಡ್ಡೆ 2,175 ಟನ್ ಟಮೋಟೊ, 3,620 ಟನ್ ಈರುಳ್ಳಿ ಮತ್ತು 1,126 ಟನ್ ಮಾವಿನ ಹಣ್ಣನ್ನು ಉತ್ಪಾದಿಸಲಾಗುತ್ತಿದೆ.

ಈ) 10,230 ಟನ್

ಧಾರವಾಡದ ಎ.ಪಿ.ಎಂ.ಸಿ.ಯನ್ನು ಹೊಸ ಮಾರುಕಟ್ಟೆಗೆ ಸ್ಥಳಾಂತರಿಸುವ ಕುರಿತು.

2481(2063)

ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ(ಧಾರವಾಡ): ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದ ಎಪಿಎಂಸಿಯನ್ನು ಹೊಸ ಮಾರುಕಟ್ಟೆಗೆ ಸ್ಥಳಾಂತರಿಸಲು ಇರುವ ತೊಂದರೆಗಳೇನು?

ಆ) ಧಾರವಾಡದ ಮಾರುಕಟ್ಟೆಯಲ್ಲಿ ಲೈಸನ್ಸ್ ಇರುವ ಹಮಾಲರಿಗಾಗಿ ವಸತಿ ಕಟ್ಟಡ ಕಟ್ಟಿಸಿ ಕೊಡಲು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು;

ಇ) ಸದರಿಯವರಿಗೆ ವಸತಿ ಕಟ್ಟಡ ಕಟ್ಟಿಸಿಕೊಡಲು ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಆರ್.ಬಿ.ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಮಾರುಕಟ್ಟೆ ಪ್ರಾಂಗಣದ ಹೊಸ ವಿಸ್ತರಣೆ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ಧಾರವಾಡ, ಸವದತ್ತಿ ಮುಖ್ಯ ರಸ್ತೆಯಿಂದ ಹೊಸ ಪ್ರಾಂಗಣಕ್ಕೆ ವಾಹನ ಸಂಚಾರಕ್ಕಾಗಿ ಸಂಪರ್ಕ ಕಲ್ಪಿಸಲು ಇಕ್ಕಟ್ಟಾದ ರಸ್ತೆ ಇದೆ. ವಾಹನ ಸಂಚಾರ ವ್ಯವಸ್ಥೆಗೆ ಅಡಚಣೆ ಇರುವುದರಿಂದ ವ್ಯಾಪಾರ ವಹಿವಾಟು ಹೊಸ ಪ್ರಾಂಗಣಕ್ಕೆ ಸ್ಥಳಾಂತರಿಸುವಲ್ಲಿ ವಿಳಂಬವಾಗುತ್ತಿದೆ. ಸಂಪರ್ಕ ರಸ್ತೆ ವಿಸ್ತರಣೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನದ ಮೂಲಕ ಪಡೆಯಲು ಉದ್ದೇಶಿಸಲಾಗಿದೆ.

ಆ) ಹಮಾಲರ ವಸತಿ ಯೋಜನೆಯ ಪ್ರಥಮ ಹಂತದಲ್ಲಿ ರಾಜ್ಯದಲ್ಲಿ 21 ಮಾರುಕಟ್ಟೆ ಸಮಿತಿಗಳನ್ನು ಗುರುತಿಸಲಾಗಿದೆ. ಇದರಲ್ಲಿ ಧಾರವಾಡ ಮಾರುಕಟ್ಟೆ ಸಮಿತಿ ಸೇರಿರುವುದಿಲ್ಲ.

ಇ) ಆಶ್ರಯ ಹಾಗೂ ಅಂಬೇಡ್ಕರ್ ಯೋಜನೆಗಳ ಅಡಿಯಲ್ಲಿ ಸರ್ಕಾರ ರಚಿಸಿರುವ ವಸತಿ ಸಮಿತಿಗಳು ವಸತಿ ಗೃಹಗಳನ್ನು ಮಂಜೂರು ಮಾಡುವಾಗ ಮಾರುಕಟ್ಟೆ ಸಮಿತಿಗಳಲ್ಲಿ ಲೈಸನ್ಸ್ ಪಡೆದ ಹಮಾಲರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಆದ್ಯತೆ ಮೇರೆಗೆ ಹಾಗೂ ಇತರೆ ಹಮಾಲರಿಗೂ ಮಂಜೂರು ಮಾಡಲು ಸದರಿ ವಸತಿ ಸಮಿತಿಗಳನ್ನು ವಿನಂತಿಸಲು ಮಾರುಕಟ್ಟೆ ಸಮಿತಿಗಳಿಗೆ ಸೂಚನೆ ನೀಡಲಾಗಿದೆ.

ಟಿ.ನರಸೀಪುರ ತಾಲ್ಲೂಕಿನಲ್ಲಿ ಆಶ್ರಯ ಯೋಜನೆಯಡಿ ನಿವೇಶನಗಳ ಹಂಚಿಕೆ.

2484(ಎಲ್ಜೆಡ್)

ಡಾ: ಭಾರತಿ ಶಂಕರ್(ಟಿ.ನರಸೀಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಟಿ.ನರಸೀಪುರ ವಿಧಾನಸಭಾ ಕ್ಷೇತ್ರ ಅನೇಕ ಗ್ರಾಮಗಳಲ್ಲಿ ಆಶ್ರಯ ನಿವೇಶನ ಹಂಚಿಕೆಗಾಗಿ ಭೂಸ್ವಾಧೀನಕ್ಕೆ ಅರ್ಜಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಹಾಗಿದ್ದಲ್ಲಿ ಯಾವ ಯಾವ ಗ್ರಾಮಗಳಲ್ಲಿ ಪ್ರಸ್ತಾವನೆ ಬಂದಿವೆ?

ಇ. ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?